# ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಬಾಗಲಕೋಟೆ

**ಸತ್ರ ಮೊಕದ್ದಮೆ ಸಂ.10/2023**

| | | | |
|---|---|---|---|
| ಹೆಸರು | : | ರಾಮಣ್ಣ ಕಂಡಣ್ಣನವರ | ಫ್ರಾಸಾ-05 |
| ತಂದೆಯ ಹೆಸರು | : | ಯಂಕಪ್ಪ | ಚಾಸಾ-06 |
| ವರ್ಷ | : | 68 ವರ್ಷ | |
| ಉದ್ಯೋಗ | : | ಒಕ್ಕಲುತನ | |
| ವಿಳಾಸ | : | ಕೊಣ್ಣೂರು | |

ದಿಃ 11.07.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

## ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದ

ಚಾಸಾ -1 ನನ್ನ ತಂಗಿ. ಮೃತ ರಂಗವ್ವ ಚಾಸಾ -1 ರವರ ಮಗಳು. ನ್ಯಾಯಾಲಯದ ಮುಂದಿರುವ 1 ನೇಆರೋಪಿ ರಂಗವ್ವಳ ಗಂಡ. 2 ನೇ ಆರೋಪಿಯು 1 ನೇ ಆರೋಪಿತನ ತಾಯಿ. ಈಗ ಸುಮಾರು 18 ವರ್ಷಗಳ ಹಿಂದೆ ನನ್ನ ತಂಗಿಯ ಮಗಳನ್ನು ಆರೋಪಿತನಿಗೆ ಕೊಟ್ಟು ಮದುವೆ ಮಾಡಿದೆದವು. ಆರೋಪಿ ಮತ್ತು ಮೃತ ಗಂಗವ್ವ ನಕ್ಕರಗೊಂದಿಗೆ ಗ್ರಾಮದಲ್ಲಿ ಇರುತ್ತಿದ್ದರು. ಅವರಿಬ್ಬರ ದಾಂಪತ್ಯದಿಂದ ಮೂರು ಜನ ಮಕ್ಕಳು. 1 ನೇ ಆರೋಪಿ ರಂಗವ್ವಳನ್ನು ಚೆನ್ನಾಗಿ ನೋಡಿಕೊಳ್ಳುತ್ತಿದ್ದ. ರಂಗವ್ವಳು ಅಶಕ್ತಳಾಗಿದ್ದಳು. ಅವಳಿಗೆ ಯಾವುದೇ ಕೆಲಸ ಮಾಡಲು ಆಗುತ್ತಿರಲಿಲ್ಲ. ಈಗ ಅಂದಾಜು ಎರಡು ವರ್ಷಗಳ ಹಿಂದೆ ರಾತ್ರಿ ನಾನು ನಮ್ಮ ಊರಿನಲ್ಲಿ ನನ್ನ ಮನೆಯಲ್ಲಿದ್ದಾಗ ರಂಗವ್ವ ತಮ್ಮ ಮನೆಯಲ್ಲಿ ಬಿದ್ದು ತಲೆಗೆ ಪೆಟ್ಟು ಮಾಡಿಕೊಂಡಿದ್ದರಿಂದ ಆಕೆಯನ್ನು ಬೀಳಗಿ ಸರ್ಕಾರಿ ಆಸ್ಪತ್ರೆಗೆ ಚಿಕಿತ್ಸೆಗಾಗಿ ದಾಖಲಿಸಿದ್ದಾರೆ ಎಂದು ನನಗೆ ನಕ್ಕರಗೊಂದಿಗೆ ಗ್ರಾಮದ ಯಾರೋ ಗ್ರಾಮಸ್ಥರು ತಿಳಿಸಿರುತ್ತಾರೆ. ವಿಷಯ ತಿಳಿದು ಮರುದಿನ ಬೆಳಿಗ್ಗೆ ಸುಮಾರು 10.00 ಗಂಟೆಗೆ ಬೀಳಗಿ ಸರ್ಕಾರಿ ಆಸ್ಪತ್ರೆಗೆ ಭೇಟಿ ನೀಡಿ ರಂಗವ್ವಳ ಶವವನ್ನು ಶವಾಗಾರದಲ್ಲಿ ನೋಡಿರುತ್ತೇನೆ. ಆರೋಪಿ ರಂಗವ್ವಳಿಗೆ ಯಾವುದೇ ತೊಂದರೆ ಮಾಡಿರುವುದಿಲ್ಲ. ನಾನು ಪೋಲಿಸರ ಮುಂದೆ ಯಾವುದೇ ಹೇಳಿಕೆಯನ್ನು ನೀಡಿರುವುದಿಲ್ಲ.

(ಈ ಹಂತದಲ್ಲಿ ಮಾನ್ಯ ಸರ್ಕಾರಿ ಅಭಿಯೋಜಕರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿರುತ್ತಾರೆ. ಅನುಮತಿಯನ್ನು ನೀಡಲಾಯಿತು).

**ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದ**

ಚಾಸಾ -1 ರವರ ಮಗಳು ರಂಗವ್ವ 1 ನೇ ಆರೋಪಿತನನ್ನು ಮದುವೆ ಮಾಡಿಕೊಂಡು ಆತನ ಮನೆಗೆ ಹೋದಾಗ 1 ಮತ್ತು 2 ನೇ ಆರೋಪಿತರು ರಂಗವ್ವಳಿಗೆ ಸರಿಯಾಗಿ ನೋಡಿಕೊಳ್ಳದೇ ಅಡುಗೆ ಮಾಡಲು ಬರುವುದಿಲ್ಲ ಹಾಗೂ ಕೂಲಿ ಕೆಲಸಕ್ಕೆ ಹೋಗುವುದಿಲ್ಲ ಅಂತಾ ಹೇಳಿ ಅವಳೊಂದಿಗೆ ಗಲಾಟೆ ಮಾಡಿ 2 ನೇ ಆರೋಪಿತಳ ಮಾತು ಕೇಳಿ 1 ನೇ ಆರೋಪಿ ದಿನಾಲೂ ಸರಾಯಿ ಕುಡಿದು ಬಂದು ರಂಗವ್ವಳಿಗೆ ಹೊಡಿಯುತ್ತಿದ್ದ ವಿಚಾರ ನನಗೆ ತಿಳಿದು ಬಂದಿರುತ್ತದೆ ಎಂದರೆ ಸರಿಯಲ್ಲ. ಚಾಸಾ -1 ರವರು ರಂಗವ್ವಳು ದೈಹಿಕವಾಗಿ ಅಶಕ್ತಳಿರುವುದರಿಂದ ಆಕೆಗೆ ತೊಂದರೆ ಕೊಡಬೇಡ್ರಿ ಎಂದು ಆರೋಪಿತರಿಗೆ ತಿಳಿಸಿದರೂ ಸಹ ಅವರು ರಂಗವ್ವಳಿಗೆ ತೊಂದರೆ ಕೊಡುತ್ತಿದ್ದುದರಿಂದ ನಾನು ಮತ್ತು ನಕ್ಕರಗೊಂದಿ ಗ್ರಾಮದ ಹಿರಿಯರು ಸೇರಿಸಿ ಚಾಸಾ -1 ರವರ ಪಾಲಿಗೆ ಬಂದ 20 ಗುಂಟೆ ಜಮೀನನ್ನು 1 ನೇ ಆರೋಪಿತನಿಗೆ ಸಾಗುವಳಿ ಮಾಡಲು ಕೊಡಿಸಿದ್ದೆವು ಎಂದರೆ ಸರಿಯಲ್ಲ.

ದಿನಾಂಕ 30.11.2022 ರಂದು ಚಾಸಾ -1 ರವರು ನಮ್ಮ ಮನೆಯಲ್ಲಿ ವಾಸ್ತವ್ಯ ಮಾಡಿದಾಗ ಅದೇ ದಿನ ರಾತ್ರಿ 01.00 ಗಂಟೆ ಸುಮಾರಿಗೆ ನಕ್ಕರಗೊದಿಗೆ ಗ್ರಾಮದ ಯಾರೋ ಒಬ್ಬರು ನನಗೆ ಕರೆ ಮಾಡಿ ಆರೋಪಿತರು ರಂಗವ್ವಳೊಂದಿಗೆ ಜಗಳ ಮಾಡಿ 1 ನೇ ಆರೋಪಿ ಆಕೆಯ ಮೇಲೆ ಹಲ್ಲೆ ಮಾಡಿದ್ದರಿಂದ ಆಕೆ ಮೃತ ಪಟ್ಟಿದ್ದು, ಆಕೆಯ ಮೃತ ದೇಹ ಬೀಳಗಿ ಸರ್ಕಾರಿ ಆಸ್ಪತ್ರೆಯಲ್ಲಿ ಇರುವುದಾಗಿ ನನಗೆ ತಿಳಿಸಿದ್ದರಿಂದ ನಾನು ಬೆಳಿಗ್ಗೆಯಾದ ನಂತರ ಚಾಸಾ -1 ರವರ ಜೊತೆ ಬೀಳಗಿ ಸರ್ಕಾರಿ ಆಸ್ಪತ್ರೆಗೆ ಬಂದು ರಂಗವ್ವ ಶವವನ್ನು ನೋಡಿ ಅಲ್ಲಿದ್ದವರಿಗೆ ವಿಚಾರಿಸಿದಾಗ ಹಿಂದಿನ ದಿನ ರಾತ್ರಿ 10.00 ಗಂಟೆಗೆ 1 ನೇ ಆರೋಪಿ ಸಾರಾಯಿ ಕುಡಿದು ಮನೆಗೆ ಬಂದಾಗ 2 ನೇ ಆರೋಪಿ 1 ನೇ ಆರೋಪಿತನಿಗೆ ರಂಗವ್ವ ರೂ. 40/- ಕಳ್ಳತನ ಮಾಡಿದ್ದಾಳೆ ಎಂದು ಹೇಳಿದಾಗ 1 ನೇ ಆರೋಪಿ ರಂಗವ್ವಳನ್ನು ವಿಚಾರಿಸಿದಾಗ ರಂಗವ್ವಳು ಬಾಯಿ ಮಾಡಿದಾಗ 1 ನೇ ಆರೋಪಿ ತನ್ನ ಕೈಗಳಿಂದ ಆಕೆಯ ತಲೆಗೆ ಹಲ್ಲೆ ಮಾಡಿದ್ದರಿಂದ ಆಕೆ ಕೆಳಗೆ ಬಿದ್ದಾಗ ಓಣಿಯಲ್ಲಿ ಸೇರಿದ ಜನರು ಆರೋಪಿತರಿಗೆ ಬೈದಿದ್ದರಿಂದ ಆರೋಪಿತರಿಬ್ಬರೂ ಅನಗವಾಡಿ ಕ್ರಾಸ್ ನಲ್ಲಿರುವ ಅಕ್ಕಿಮರಡಿ ಆಸ್ಪತ್ರೆಗೆ ರಂಗವ್ವಳನ್ನು ಕರೆದುಕೊಂಡು ಹೋದಾಗ ಅಲ್ಲಿ ವೈದ್ಯರು ರಂಗವ್ವಳಿಗೆ ಚಿಕಿತ್ಸೆ ಕೊಡದಿದ್ದರಿಂದ 1 ನೇ ಆರೋಪಿ ಚಾಸಾ -12 ಮತ್ತು 13 ರವರನ್ನು ಕರೆಯಿಸಿ ಬೀಳಗಿ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋದಾಗ ಅಲ್ಲಿ ವೈದ್ಯರು ರಂಗವ್ವ ಮೃತ ಪಟ್ಟ ಬಗ್ಗೆ ತಿಳಿಸಿದರು ಎಂದು ನನಗೆ ತಿಳಿದುಬಂದಿತ್ತು ಎಂದರೆ ಸರಿಯಲ್ಲ. ದಿನಾಂಕ 01.12.2022 ರಂದು ನಾನು ಈಗ ಓದಿ ಹೇಳಿದಂತೆ ಪೊಲೀಸರ ಮುಂದೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಹೇಳಿಕೆಯಲ್ಲಿ ''ನನ್ನ ಊರು ಗದಗ ಜಿಲ್ಲೆಯ --------------------ರಂಗವ್ವಳ ತಲೆಗೆ ಬಲವಾಗಿ ಹೊಡೆದು ಕೊಲೆ ಮಾಡಿರುತ್ತಾರೆ'' ಎಂದು ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯನ್ನು ನಿಶಾನೆ

ಪಿ-7 ಎಂದು ಗುರುತಿಸಲಾಯಿತು. ನನ್ನ ತಂಗಿ ಮತ್ತು ಆಕೆಯ ಮೊಮ್ಮಕ್ಕಳು ಈಗ ಆರೋಪಿತನೊಂದಿಗೆ ವಾಸವಾಗಿದ್ದೇವೆ ಎಂದರೆ ಸರಿ. ಆ ಕಾರಣಕ್ಕಾಗಿ ಆರೋಪಿತನಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ** ಆರೋಪಿ ಪರ ವಕೀಲರಿಂದ

ಆರೋಪಿತರ ಪರ ವಕೀಲರು ಪಾಟೀ ಸವಾಲು ಇರುವುದಿಲ್ಲ ಎಂದು ತಿಳಿಸಿರುತ್ತಾರೆ.

ಮರು ವಿಚಾರಣೆ ಇಲ್ಲ.

(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ. ಹೇ. ಕೇ. ಸರಿ ಇದೆ ಎಂದು ಒಪ್ಪಿದರು

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬಾಗಲಕೋಟೆ .

# <u>ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಬಾಗಲಕೋಟೆ</u>

**ಸತ್ರ ಮೊಕದ್ದಮೆ ಸಂ.10/2023**

| | | |
|---|---|---|
| ಹೆಸರು | : ಲಕ್ಷ್ಮೀ ಕಾಡಣ್ಣವರ | ಫ್ರಾಸಾ-04 |
| ಗಂಡನ ಹೆಸರು | : ಚೌಡಪ್ಪ | ಚಾಸಾ-04 |
| ವರ್ಷ | : 42 ವರ್ಷ | |
| ಉದ್ಯೋಗ | : ಮನೆಕೆಲಸ | |
| ವಿಳಾಸ | : ನಕ್ಕರಗೊಂದಿ | |

ದಿಃ 11.07.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

## ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದ

ಸಾಕ್ಷಿಗೆ ಒಂದು ದಾಖಲಾತಿ ತೋರಿಸಿದ್ದು, ಅದರಲ್ಲಿರುವ ತನ್ನ ಸಹಿ ನೋಡಿ ಗುರುತಿಸಿದ್ದು, ಸದರಿ ದಾಖಲಾತಿ ಶವ ಪಂಚನಾಮೆಯಾಗಿದ್ದು, ಅದನ್ನು ಈಗಾಗಲೇ ನಿಪಿ -5 ಎಂದು ಗುರುತಿಸಲಾಗಿದ್ದು ಸಾಕ್ಷಿಯ ಸಹಿಯನ್ನು ನಿಪಿ -5 (ಸಿ) ಎಂದು ಗುರುತಿಸಲಾಯಿತು.

ಈಗ ಅಂದಾಜು 2 ವರ್ಷಗಳ ಹಿಂದೆ ಚಾಸಾ -1 ರವರ ಮಗಳು ಮೃತ ಪಟ್ಟ ವಿಷಯ ತಿಳಿದು ನಾನು ಬೀಳಗಿ ಸರ್ಕಾರಿ ಆಸ್ಪತ್ರೆಗೆ ಶವ ನೋಡಲು ಹೋದಾಗ ಅಲ್ಲಿಗೆ ಬಂದ ಪೋಲಿಸರು ನಿಪಿ -5 ದಾಖಲಾತಿಯ ಮೇಲೆ ನನ್ನ ಸಹಿ ಪಡೆದಿರುತ್ತಾರೆ. ನಿಪಿ -5 ರಲ್ಲಿ ಏನೆಲ್ಲಾ ಬರೆಯಲಾಗಿದೆ ಎಂದದು ನನಗೆ ಗೊತ್ತಿಲ್ಲ. ಸಾಕ್ಷಿಯು ಎರಡು ಭಾವಚಿತ್ರಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ಆಸ್ಪತ್ರೆಯಲ್ಲಿ ತೆಗೆದ ಬಗ್ಗೆ ಗುರುತಿಸುತ್ತಾರೆ. ಸಾಕ್ಷಿಯು ಗುರುತಿಸಿದ ಭಾವಚಿತ್ರಗಳನ್ನು ಒಟ್ಟಾರೆಯಾಗಿ ನಿಪಿ -6 ಎಂದು ಈಗಾಗಲೇ ಗುರುತಿಸಲಾಗಿರುತ್ತದೆ. ಭಾವಚಿತ್ರಗಳನ್ನು ಯಾವ ಕಾರಣಕ್ಕೆ ತೆಗೆದಿದ್ದಾರೆ ಎಂದು ನನಗೆ ಗೊತ್ತಿಲ್ಲ. ರಂಗವ್ವನ ಮೃತ ದೇಹದ ಮೇಲೆ ಏನೆಲ್ಲಾ ಗಾಯಗಳಾಗಿದ್ದವು ಎಂದು ನಾನು ಗಮನಿಸಲಿಲ್ಲ. ರಂಗವ್ವ ಯಾವ ಕಾರಣಕ್ಕಾಗಿ ಮೃತ ಪಟ್ಟಿದ್ದಾಳೆ ನನಗೆ ಗೊತ್ತಿಲ್ಲ.

(ಈ ಹಂತದಲ್ಲಿ ಮಾನ್ಯ ಸರ್ಕಾರಿ ಅಭಿಯೋಜಕರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿರುತ್ತಾರೆ. ಅನುಮತಿಯನ್ನು ನೀಡಲಾಯಿತು).

**ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದ**

ದಿನಾಂಕ 01.12.2022 ರಂದು ಮಧ್ಯಾಹ್ನ 03.00 ಗಂಟೆಗೆ ನಾನು, ಚಾಸಾ -2 ಮತ್ತು 3 ರವರು ಬೀಳಗಿ ಸರ್ಕಾರಿ ಆಸ್ಪತ್ರೆಯ ಶವಾಗಾರಕ್ಕೆ ಮೃತ ರಂಗವ್ವಳ ಶವವನ್ನು ನೋಡಲು ಹೋಗಿದ್ದಾಗ ಪೋಲಿಸರು ಶವಾಗಾರದಲ್ಲಿದ್ದ ರಂಗವ್ವಳ ಮೃತ ದೇಹದ ಮೇಲೆ ನಿಪಿ -5 ರಂತೆ ಶವ ಪಂಚನಾಮೆ ಮಾಡಿ ರಂಗವ್ವಳ ಹಣೆಯ ಎಡಭಾಗದಲ್ಲಿ ಎಡಗಣ್ಣಿನ ಹತ್ತಿರ ಹಾಗೂ ಮೃತಳ ಎಡಭುಜ ಹಾಗೂ ಬಲ ಪಕ್ಕಡಿಯ ಮೇಲೆ ಕಂದುಗಟ್ಟಿದ ಕಲೆಗಳು ಇದ್ದುದನ್ನು ನಾನು ಗಮನಿಸಿದ್ದೇನೆ ಎಂದರೆ ಸರಿಯಲ್ಲ. ನಿಪಿ -6 ಭಾವಚಿತ್ರಗಳನ್ನು ಅದೇ ಸಮಯದಲ್ಲಿ ತೆಗೆಯಲಾಗಿಗೆ ಎಂದರೆ ಸರಿಯಲ್ಲ. ಪಂಚನಾಮೆಯನ್ನು ನನ್ನ ಸಮಕ್ಷಮ ಜರುಗಿಸಿದ್ದರೂ ಸಹ ನಾನು ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ** ಆರೋಪಿ ಪರ ವಕೀಲರಿಂದ

ಆರೋಪಿತರ ಪರ ವಕೀಲರು ಪಾಟೀ ಸವಾಲು ಇರುವುದಿಲ್ಲ ಎಂದು ತಿಳಿಸಿರುತ್ತಾರೆ.

ಮರು ವಿಚಾರಣೆ ಇಲ್ಲ.

(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ. ಹೇ. ಕೇ. ಸರಿ ಇದೆ ಎಂದು ಒಪ್ಪಿದರು

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬಾಗಲಕೋಟೆ .

# ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಬಾಗಲಕೋಟೆ

**ಸತ್ರ ಮೊಕದ್ದಮೆ ಸಂ.10/2023**

| | | | |
|---|---|---|---|
| ಹೆಸರು | : | ಹನಮಂತ ಮುಳ್ಳೂರ | ಫಿರ್ಯಾಸಾ-03 |
| ತಂದೆಯ ಹೆಸರು | : | ಯಮನಪ್ಪ | ಚಾಸಾ-03 |
| ವರ್ಷ | : | 64 ವರ್ಷ | |
| ಉದ್ಯೋಗ | : | ಒಕ್ಕಲುತನ | |
| ವಿಳಾಸ | : | ನಕ್ಕರಗೊಂದಿ | |

ದಿಃ 11.07.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

## ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದ

ಸಾಕ್ಷಿಗೆ ಎರಡು ದಾಖಲಾತಿ ತೋರಿಸಿದ್ದು, ಅವುಗಳಲ್ಲಿರು ತಮ್ಮ ಸಹಿ ನೋಡಿ ಗುರುತಿಸಿದ್ದು, ಸದರಿ ದಾಖಲಾತಿಗಳು ಸ್ಥಳ ಪಂಚನಾಮೆ ಹಾಗೂ ಶವ ಪಂಚನಾಮೆಯಾಗಿದ್ದು, ಅವುಗಳನ್ನು ಈಗಾಗಲೇ ನಿಪಿ -4 ಮತ್ತು 5 ಎಂದು ಗುರುತಿಸಲಾಗಿದ್ದು ನಿಪಿ -4 ಮತ್ತು 5 ರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ -4 (ಬಿ) ಮತ್ತು ನಿಪಿ -5 (ಬಿ) ಎಂದು ಗುರುತಿಸಲಾಯಿತು.

ಈಗ ಅಂದಾಜು ಎರಡು ವರ್ಷಗಳ ಹಿಂದೆ ಪೋಲಿಸರು ನಮ್ಮ ಊರಿಗೆ ಬಂದಾಗ ನಿಪಿ -4 ರ ಮೇಲೆ ನನ್ನ ಸಹಿ ಪಡೆದಿರುತ್ತಾರೆ. ನಿಪಿ -4 ರಲ್ಲಿ ಏನೆಲ್ಲಾ ವಿಷಯಗಳನ್ನು ಬರೆಯಲಾಗಿದೆ ಎಂದು ನನಗೆ ಗೊತ್ತಿಲ್ಲ. ಪೋಲಿಸರು ನನ್ನ ಸಮಕ್ಷಮ ಯಾವುದೇ ಸ್ಥಳ ಪಂಚನಾಮೆ ಜರುಗಿಸಿರುವುದಿಲ್ಲ ಮತ್ತು ಯಾವುದೇ ವಸ್ತುಗಳನ್ನು ಪಂಚನಾಮೆ ಅಡಿಯಲ್ಲಿ ಜಪ್ತು ಪಡಿಸಿಕೊಂಡಿರುವುದಿಲ್ಲ. ಸಾಕ್ಷಿಯು 6 ಭಾವ ಚಿತ್ರಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ಈಗಾಗಲೇ ನಿಪಿ -2 ಎಂದು ಗುರುತಿಸಲಾಗಿರುತ್ತದೆ. ನಿಪಿ -2 ಭಾವಚಿತ್ರಗಳನ್ನು ಆರೋಪಿತರ ಮನೆಯ ಮುಂದೆ ತೆಗೆಯಲಾಗಿರುತ್ತದೆ. ನಿಪಿ -2 ಭಾವಚಿತ್ರಗಳನ್ನು ಯಾವ ಕಾರಣಕ್ಕೆ ತೆಗೆದಿದ್ದಾರೆ ನನಗೆ ಗೊತ್ತಿಲ್ಲ. ಚಾಸಾ -1 ರವರ ಮಗಳು ಮೃತ ಪಟ್ಟ ವಿಷಯ ತಿಳಿದು ನಾನು ಬೀಳಗಿ ಸರ್ಕಾರಿ ಆಸ್ಪತ್ರೆಗೆ ಶವ ನೋಡಲು ಹೋದಾಗ ಅಲ್ಲಿಗೆ ಬಂದ ಪೋಲಿಸರು ನಿಪಿ -5 ದಾಖಲಾತಿಯ ಮೇಲೆ ನನ್ನ ಸಹಿ ಪಡೆದಿರುತ್ತಾರೆ. ನಿಪಿ -5 ರಲ್ಲಿ ಏನೆಲ್ಲಾ ಬರೆಯಲಾಗಿದೆ ಎಂದದು ನನಗೆ ಗೊತ್ತಿಲ್ಲ. ಸಾಕ್ಷಿಯು ಎರಡು ಭಾವಚಿತ್ರಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ಆಸ್ಪತ್ರೆಯಲ್ಲಿ ತೆಗೆದ ಬಗ್ಗೆ ಗುರುತಿಸುತ್ತಾರೆ. ಸಾಕ್ಷಿಯು ಗುರುತಿಸಿದ ಭಾವಚಿತ್ರಗಳನ್ನು ಒಟ್ಟಾರೆಯಾಗಿ ನಿಪಿ -6 ಎಂದು

ಈಗಾಗಲೇ ಗುರುತಿಸಲಾಗಿರುತ್ತದೆ. ಭಾವಚಿತ್ರಗಳನ್ನು ಯಾವ ಕಾರಣಕ್ಕೆ ತೆಗೆದಿದ್ದಾರೆ ಎಂದು ನನಗೆ ಗೊತ್ತಿಲ್ಲ. ರಂಗವ್ವನ ಮೃತ ದೇಹದ ಮೇಲೆ ಏನೆಲ್ಲಾ ಗಾಯಗಳಾಗಿದ್ದವು ಎಂದು ನಾನು ಗಮನಿಸಲಿಲ್ಲ. ರಂಗವ್ವ ಯಾವ ಕಾರಣಕ್ಕಾಗಿ ಮೃತ ಪಟ್ಟಿದ್ದಾಳೆ ನನಗೆ ಗೊತ್ತಿಲ್ಲ.

(ಈ ಹಂತದಲ್ಲಿ ಮಾನ್ಯ ಸರ್ಕಾರಿ ಅಭಿಯೋಜಕರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿರುತ್ತಾರೆ. ಅನುಮತಿಯನ್ನು ನೀಡಲಾಯಿತು).

**ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದ**

ದಿನಾಂಕ 01.12.2022 ರಂದು ಮಧ್ಯಾಹ್ನ 12.00 ಗಂಟೆಗೆ ನನ್ನನ್ನು ಹಾಗೂ ಚಾಸಾ -2 ರವರನ್ನು ಬಾಗಲಕೋಟೆ ಗ್ರಾಮೀಣ ಪೋಲಿಸರು ಆರೋಪಿತರ ಮನೆಯ ಬಳಿ ಕರೆಸಿ ಅಲ್ಲಿ ಹಾಜರಿದ್ದ ಚಾಸಾ -1 ರವರು ತೋರಿಸಿದ ಸ್ಥಳದಲ್ಲಿ ನಿಪಿ -4 ರಂತೆ ಪಂಚನಾಮೆ ಮಾಡಿ ಸ್ಥಳದಲ್ಲಿ ಬಿದ್ದಿದ್ದ ಈಗ ನ್ಯಾಯಾಲಯದ ಮುಂದಿರುವ ಬಳೆ ಚೂರುಗಳನ್ನು ಜಪ್ತುಪಡಿಸಿಕೊಂಡು ನಿಪಿ -4 ರಲ್ಲಿನ ವಿಷಯಗಳನ್ನು ನನಗೆ ತಿಳಿಸಿ ನನ್ನ ಸಹಿ ಪಡೆದಿದ್ದಾರೆ ಎಂದರೆ ಸರಿಯಲ್ಲ. ಪಂಚನಾಮೆ ಜರುಗಿಸಿದ್ದರ ಸಲುವಾಗಿ ನಿಪಿ -2 ಭಾವಚಿತ್ರಗಳನ್ನು ತೆಗೆದಿದ್ದಾರೆ ಎಂದರೆ ಸರಿಯಲ್ಲ. ಅದೇ ದಿನ ಮಧ್ಯಾಹ್ನ 03.00 ಗಂಟೆಗೆ ನನ್ನನ್ನು ಹಾಗೂ ಚಾಸಾ -3 ಮತ್ತು 4 ರವರನ್ನು ಬೀಳಗಿ ಸರ್ಕಾರಿ ಆಸ್ಪತ್ರೆಯ ಶವಾಗಾರಕ್ಕೆ ಕರೆಯಿಸಿ ಶವಾಗಾರದಲ್ಲಿದ್ದ ರಂಗವ್ವಳ ಮೃತ ದೇಹದ ಮೇಲೆ ನಿಪಿ -5 ರಂತೆ ಶವ ಪಂಚನಾಮೆ ಮಾಡಿ ರಂಗವ್ವಳ ಹಣೆಯ ಎಡಭಾಗದಲ್ಲಿ ಎಡಗಣ್ಣಿನ ಹತ್ತಿರ ಹಾಗೂ ಮೃತಳ ಎಡಭುಜ ಹಾಗೂ ಬಲ ಪಕ್ಕಡಿಯ ಮೇಲೆ ಕಂದುಗಟ್ಟಿದ ಕಲೆಗಳು ಇದ್ದುದನ್ನು ನಾನು ಗಮನಿಸಿದ್ದೇನೆ ಎಂದರೆ ಸರಿಯಲ್ಲ. ನಿಪಿ -6 ಭಾವಚಿತ್ರಗಳನ್ನು ಅದೇ ಸಮಯದಲ್ಲಿ ತೆಗೆಯಲಾಗಿಗೆ ಎಂದರೆ ಸರಿಯಲ್ಲ. ಪಂಚನಾಮೆಯನ್ನು ನನ್ನ ಸಮಕ್ಷಮ ಜರುಗಿಸಿದ್ದರೂ ಸಹ ನಾನು ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ** ಆರೋಪಿ ಪರ ವಕೀಲರಿಂದ

ಆರೋಪಿತರ ಪರ ವಕೀಲರು ಪಾಟೀ ಸವಾಲು ಇರುವುದಿಲ್ಲ ಎಂದು ತಿಳಿಸಿರುತ್ತಾರೆ.

ಮರು ವಿಚಾರಣೆ ಇಲ್ಲ.

(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ. ಹೇ. ಕೇ. ಸರಿ ಇದೆ ಎಂದು ಒಪ್ಪಿದರು

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬಾಗಲಕೋಟೆ .

# ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಬಾಗಲಕೋಟೆ

**ಸತ್ರ ಮೊಕದ್ದಮೆ ಸಂ.10/2023**

| | | | |
|---|---|---|---|
| ಹೆಸರು | : | ಮಲ್ಲಪ್ಪ ಚಿಮ್ಮನಕಟ್ಟಿ | ಫ್ರಾಸಾ-02 |
| ತಂದೆಯ ಹೆಸರು | : | ಬಾಲಪ್ಪ | ಚಾಸಾ-02 |
| ವರ್ಷ | : | 48 ವರ್ಷ | |
| ಉದ್ಯೋಗ | : | ಒಕ್ಕಲುತನ | |
| ವಿಳಾಸ | : | ನಕ್ಕರಗೊಂದಿ | |

ದಿಃ 11.07.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

## ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದ

ಸಾಕ್ಷಿಗೆ ಎರಡು ದಾಖಲಾತಿ ತೋರಿಸಿದ್ದು, ಅವುಗಳಲ್ಲಿರು ತಮ್ಮ ಸಹಿ ನೋಡಿ ಗುರುತಿಸಿದ್ದು, ಸದರಿ ದಾಖಲಾತಿಗಳು ಸ್ಥಳ ಪಂಚನಾಮೆ ಹಾಗೂ ಶವ ಪಂಚನಾಮೆಯಾಗಿದ್ದು, ಅವುಗಳನ್ನು ನಿಪಿ -4 ಮತ್ತು 5 ಎಂದು ಗುರುತಿಸಲಾಯಿತು. ನಿಪಿ -4 ಮತ್ತು 5 ರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ -4 (ಎ) ಮತ್ತು ನಿಪಿ -5 (ಎ) ಎಂದು ಗುರುತಿಸಲಾಯಿತು.

ಈಗ ಅಂದಾಜು ಎರಡು ವರ್ಷಗಳ ಹಿಂದೆ ಪೋಲಿಸರು ನಮ್ಮ ಊರಿಗೆ ಬಂದಾಗ ನಿಪಿ -4 ರ ಮೇಲೆ ನನ್ನ ಸಹಿ ಪಡೆದಿರುತ್ತಾರೆ. ನಿಪಿ -4 ರಲ್ಲಿ ಏನೆಲ್ಲಾ ವಿಷಯಗಳನ್ನು ಬರೆಯಲಾಗಿದೆ ಎಂದು ನನಗೆ ಗೊತ್ತಿಲ್ಲ. ಪೋಲಿಸರು ನನ್ನ ಸಮಕ್ಷಮ ಯಾವುದೇ ಸ್ಥಳ ಪಂಚನಾಮೆ ಜರುಗಿಸಿರುವುದಿಲ್ಲ ಮತ್ತು ಯಾವುದೇ ವಸ್ತುಗಳನ್ನು ಪಂಚನಾಮೆ ಅಡಿಯಲ್ಲಿ ಜಪ್ತು ಪಡಿಸಿಕೊಂಡಿರುವುದಿಲ್ಲ. ಸಾಕ್ಷಿಯು 6 ಭಾವ ಚಿತ್ರಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ಈಗಾಗಲೇ ನಿಪಿ -2 ಎಂದು ಗುರುತಿಸಲಾಗಿರುತ್ತದೆ. ನಿಪಿ -2 ಭಾವಚಿತ್ರಗಳನ್ನು ಆರೋಪಿತರ ಮನೆಯ ಮುಂದೆ ತೆಗೆಯಲಾಗಿರುತ್ತದೆ. ನಿಪಿ -2 ಭಾವಚಿತ್ರಗಳನ್ನು ಯಾವ ಕಾರಣಕ್ಕೆ ತೆಗೆದಿದ್ದಾರೆ ನನಗೆ ಗೊತ್ತಿಲ್ಲ. ಚಾಸಾ -1 ರವರ ಮಗಳು ಮೃತ ಪಟ್ಟ ವಿಷಯ ತಿಳಿದು ನಾನು ಬೀಳಗಿ ಸರ್ಕಾರಿ ಆಸ್ಪತ್ರೆಗೆ ಶವ ನೋಡಲು ಹೋದಾಗ ಅಲ್ಲಿಗೆ ಬಂದ ಪೋಲಿಸರು ನಿಪಿ -5 ದಾಖಲಾತಿಯ ಮೇಲೆ ನನ್ನ ಸಹಿ ಪಡೆದಿರುತ್ತಾರೆ. ನಿಪಿ -5 ರಲ್ಲಿ ಏನೆಲ್ಲಾ ಬರೆಯಲಾಗಿದೆ ಎಂದದು ನನಗೆ ಗೊತ್ತಿಲ್ಲ. ಸಾಕ್ಷಿಯು ಎರಡು ಭಾವಚಿತ್ರಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ಆಸ್ಪತ್ರೆಯಲ್ಲಿ ತೆಗೆದ ಬಗ್ಗೆ ಗುರುತಿಸುತ್ತಾರೆ. ಸಾಕ್ಷಿಯು ಗುರುತಿಸಿದ ಭಾವಚಿತ್ರಗಳನ್ನು ಒಟ್ಟಾರೆಯಾಗಿ ನಿಪಿ -6 ಎಂದು

ಗುರುತಿಸಲಾಯಿತು. ಭಾವಚಿತ್ರಗಳನ್ನು ಯಾವ ಕಾರಣಕ್ಕೆ ತೆಗೆದಿದ್ದಾರೆ ಎಂದು ನನಗೆ ಗೊತ್ತಿಲ್ಲ. ರಂಗವ್ವನ ಮೃತ ದೇಹದ ಮೇಲೆ ಏನೆಲ್ಲಾ ಗಾಯಗಳಾಗಿದ್ದವು ಎಂದು ನಾನು ಗಮನಿಸಲಿಲ್ಲ. ರಂಗವ್ವ ಯಾವ ಕಾರಣಕ್ಕಾಗಿ ಮೃತ ಪಟ್ಟಿದ್ದಾಳೆ ನನಗೆ ಗೊತ್ತಿಲ್ಲ.

(ಈ ಹಂತದಲ್ಲಿ ಮಾನ್ಯ ಸರ್ಕಾರಿ ಅಭಿಯೋಜಕರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿರುತ್ತಾರೆ. ಅನುಮತಿಯನ್ನು ನೀಡಲಾಯಿತು).

**ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದ**

ದಿನಾಂಕ 01.12.2022 ರಂದು ಮಧ್ಯಾಹ್ನ 12.00 ಗಂಟೆಗೆ ನನ್ನನ್ನು ಹಾಗೂ ಚಾಸಾ -3 ರವರನ್ನು ಬಾಗಲಕೋಟೆ ಗ್ರಾಮೀಣ ಪೋಲಿಸರು ಆರೋಪಿತರ ಮನೆಯ ಬಳಿ ಕರೆಸಿ ಅಲ್ಲಿ ಹಾಜರಿದ್ದ ಚಾಸಾ -1 ರವರು ತೋರಿಸಿದ ಸ್ಥಳದಲ್ಲಿ ನಿಪಿ -4 ರಂತೆ ಪಂಚನಾಮೆ ಮಾಡಿ ಸ್ಥಳದಲ್ಲಿ ಬಿದ್ದಿದ್ದ ಈಗ ನ್ಯಾಯಾಲಯದ ಮುಂದಿರುವ ಬಳೆ ಚೂರುಗಳನ್ನು ಜಪ್ತುಪಡಿಸಿಕೊಂಡು ನಿಪಿ -4 ರಲ್ಲಿನ ವಿಷಯಗಳನ್ನು ನನಗೆ ತಿಳಿಸಿ ನನ್ನ ಸಹಿ ಪಡೆದಿದ್ದಾರೆ ಎಂದರೆ ಸರಿಯಲ್ಲ. ಪಂಚನಾಮೆ ಜರುಗಿಸಿದ್ದರ ಸಲುವಾಗಿ ನಿಪಿ -2 ಭಾವಚಿತ್ರಗಳನ್ನು ತೆಗೆದಿದ್ದಾರೆ ಎಂದರೆ ಸರಿಯಲ್ಲ. ಅದೇ ದಿನ ಮಧ್ಯಾಹ್ನ 03.00 ಗಂಟೆಗೆ ನನ್ನನ್ನು ಹಾಗೂ ಚಾಸಾ -3 ಮತ್ತು 4 ರವರನ್ನು ಬೀಳಗಿ ಸರ್ಕಾರಿ ಆಸ್ಪತ್ರೆಯ ಶವಾಗಾರಕ್ಕೆ ಕರೆಯಿಸಿ ಶವಾಗಾರದಲ್ಲಿದ್ದ ರಂಗವ್ವಳ ಮೃತ ದೇಹದ ಮೇಲೆ ನಿಪಿ -5 ರಂತೆ ಶವ ಪಂಚನಾಮೆ ಮಾಡಿ ರಂಗವ್ವಳ ಹಣೆಯ ಎಡಭಾಗದಲ್ಲಿ ಎಡಗಣ್ಣಿನ ಹತ್ತಿರ ಹಾಗೂ ಮೃತಳ ಎಡಭುಜ ಹಾಗೂ ಬಲ ಪಕ್ಕಡಿಯ ಮೇಲೆ ಕಂದುಗಟ್ಟಿದ ಕಲೆಗಳು ಇದ್ದುದನ್ನು ನಾನು ಗಮನಿಸಿದ್ದೇನೆ ಎಂದರೆ ಸರಿಯಲ್ಲ. ನಿಪಿ -6 ಭಾವಚಿತ್ರಗಳನ್ನು ಅದೇ ಸಮಯದಲ್ಲಿ ತೆಗೆಯಲಾಗಿಗೆ ಎಂದರೆ ಸರಿಯಲ್ಲ. ಪಂಚನಾಮೆಯನ್ನು ನನ್ನ ಸಮಕ್ಷಮ ಜರುಗಿಸಿದ್ದರೂ ಸಹ ನಾನು ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ** ಆರೋಪಿ ಪರ ವಕೀಲರಿಂದ

ಆರೋಪಿತರ ಪರ ವಕೀಲರು ಪಾಟೀ ಸವಾಲು ಇರುವುದಿಲ್ಲ ಎಂದು ತಿಳಿಸಿರುತ್ತಾರೆ.

ಮರು ವಿಚಾರಣೆ ಇಲ್ಲ.

(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ. ಹೇ. ಕೇ. ಸರಿ ಇದೆ ಎಂದು ಒಪ್ಪಿದರು

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬಾಗಲಕೋಟೆ.

# ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಬಾಗಲಕೋಟೆ

**ಸತ್ರ ಮೊಕದ್ದಮೆ ಸಂ.10/2023**

| | | | |
|---|---|---|---|
| ಹೆಸರು | : | ತಾಯವ್ವ ಸಣ್ಣಗೌಡರ | ಫ್ರಾಸಾ-01 |
| ಗಂಡನ ಹೆಸರು | : | ಪಾಂಡಪ್ಪ | ಚಾಸಾ-01 |
| ವರ್ಷ | : | 75 ವರ್ಷ | |
| ಉದ್ಯೋಗ | : | ಮನೆ ಕೆಲಸ | |
| ವಿಳಾಸ | : | ನತ್ತರಗೊಂದಿ | |

ದಿಃ 11.07.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

## ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದ

ಮೃತ ರಂಗವ್ವ ನನ್ನ ಮಗಳು. ನ್ಯಾಯಾಲಯದ ಮುಂದಿರುವ 1 ನೇ ಆರೋಪಿ ನನ್ನ ಅಳಿಯ. 2 ನೇ ಆರೋಪಿಯು 1 ನೇ ಆರೋಪಿತನ ತಾಯಿ. ಈಗ ನ್ಯಾಯಾಲಯದ ಮುಂದಿರುವ ಆರೋಪಿ ನನ್ನ ಮಗಳು ರಂಗವ್ವಳ ಗಂಡ. ಈಗ ಸುಮಾರು 18 ವರ್ಷಗಳ ಹಿಂದೆ ನನ್ನ ಮಗಳನ್ನು ಆರೋಪಿತನಿಗೆ ಕೊಟ್ಟು ಮದುವೆ ಮಾಡಿದೆದವು. ಅಳಿಯ - ಮಗಳು ನಮ್ಮ ಊರಿನಲ್ಲಿಯೇ ಇರುತ್ತಿದ್ದರು. ಅವರಿಬ್ಬರ ದಾಂಪತ್ಯದಿಂದ ಮೂರು ಜನ ಮಕ್ಕಳು. ನನ್ನ ಅಳಿಯ ಮಗಳನ್ನು ಚೆನ್ನಾಗಿ ನೋಡಿಕೊಳ್ಳುತ್ತಿದ್ದ. ನನ್ನ ಮಗಳು ಅಶಕ್ತಳಾಗಿದ್ದಳು. ಅವಳಿಗೆ ಯಾವುದೇ ಕೆಲಸ ನೀಗುತ್ತಿರಲಿಲ್ಲ. ಈಗ ಅಂದಾಜು ಎರಡು ವರ್ಷಗಳ ಹಿಂದೆ ರಾತ್ರಿ ನಾನು ನನ್ನ ಮನೆಯಲ್ಲಿದ್ದಾಗ ನನ್ನ ಮಗಳು ತಮ್ಮ ಮನೆಯಲ್ಲಿ ಬಿದ್ದು ತಲೆಗೆ ಪೆಟ್ಟು ಮಾಡಿಕೊಂಡಿದ್ದರಿಂದ ಆಕೆಯನ್ನು ಬೀಳಗಿ ಸರ್ಕಾರಿ ಆಸ್ಪತ್ರೆಗೆ ಚಿಕಿತ್ಸೆಗಾಗಿ ದಾಖಲಿಸಿದ್ದಾರೆ ಎಂದು ನನಗೆ ನಮ್ಮ ಮನೆಯ ಪಕ್ಕದವರು ತಿಳಿಸಿದ್ದರು. ನನಗೆ ಕಣ್ಣು ಕಾಣದ್ದರಿಂದ ಮರುದಿನ ಬೆಳಿಗ್ಗೆ ನಾನು ಬೀಳಗಿ ಸರ್ಕಾರಿ ಆಸ್ಪತ್ರೆಗೆ ಹೋಗಿ ನೋಡಿದಾಗ ನನ್ನ ಮಗಳು ಮೃತ ಪಟ್ಟಿದ್ದಳು. ನಂತರ ಅಲ್ಲಿಗೆ ಬಂದ ಪೋಲಿಸರು ಒಂದು ದಾಖಲೆಯ ಮೇಲೆ ನನ್ನ ಹೆಬ್ಬೆಟ್ಟಿನ ಗುರುತನ್ನು ಪಡೆದುಕೊಂಡಿರುತ್ತಾರೆ. ಸಾಕ್ಷಿಯು ತನ್ನ ಹೆಬ್ಬೆಟ್ಟಿನ ಗುರತನ್ನು ನೋಡಿ ಗುರುತಿಸಿದ ದಾಖಲೆಯು ದೂರಾಗಿದ್ದು, ಅದನ್ನು ನಿಪಿ -1 ಎಂದು ಗುರುತಿಸಲಾಯಿತು. ನಿಪಿ -1 ನ್ನು ಯಾರು ತಯಾರಿಸಿದ್ದಾರೆ ಮತ್ತು ಅದರಲ್ಲಿ ಏನೆಲ್ಲಾ ಬರೆಯಲಾಗಿದೆ ಎಂದು ನನಗೆ ಗೊತ್ತಿಲ್ಲ. ನಂತರ ಪೋಲಿಸರು ನನ್ನನ್ನು ನನ್ನ ಮಗಳ ಮನೆಯ ಬಳಿ ಕರೆದುಕೊಂಡು ಹೋಗಿ ಭಾವ ಚಿತ್ರಗಳನ್ನು ತೆಗೆದಿರುತ್ತಾರೆ. ಸಾಕ್ಷಿಯು 6 ಭಾವಚಿತ್ರಗಳನ್ನು

ನೋಡಿ ಗುರುತಿಸಿದ್ದು, ಅವುಗಳನ್ನು ಒಟ್ಟಾರೆಯಾಗಿ ನಿಪಿ -2 ಎಂದು ಗುರುತಿಸಲಾಯಿತು. ನಂತರ ಅದೇ ದಿನ ನನ್ನ ಮಗಳ ಶವವನ್ನು ನಮಗೆ ನೀಡಿದ್ದು, ನಾನು ಮತ್ತು ನನ್ನ ಅಳಿಯ ನಮ್ಮ ಊರಿನಲ್ಲಿ ಅಂತ್ಯ ಸಂಸ್ಕಾರ ಮಾಡಿರುತ್ತೇವೆ. ಆರೋಪಿ ನನ್ನ ಮಗಳಿಗೆ ಯಾವುದೇ ತೊಂದರೆ ಮಾಡಿರುವುದಿಲ್ಲ. ನಾನು ಪೋಲಿಸರ ಮುಂದೆ ಯಾವುದೇ ಹೇಳಿಕೆಯನ್ನು ನೀಡಿರುವುದಿಲ್ಲ.

(ಈ ಹಂತದಲ್ಲಿ ಮಾನ್ಯ ಸರ್ಕಾರಿ ಅಭಿಯೋಜಕರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿರುತ್ತಾರೆ. ಅನುಮತಿಯನ್ನು ನೀಡಲಾಯಿತು).

**ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದ**

ನನ್ನ ಮಗಳು 1 ನೇ ಆರೋಪಿತನನ್ನು ಮದುವೆ ಮಾಡಿಕೊಂಡು ಆತನ ಮನೆಗೆ ಹೋದಾಗ 1 ಮತ್ತು 2 ನೇ ಆರೋಪಿತರು ನನ್ನ ಮಗಳಿಗೆ ಸರಿಯಾಗಿ ಅಡುಗೆ ಮಾಡಲು ಬರುವುದಿಲ್ಲ ಹಾಗೂ ಕೂಲಿ ಕೆಲಸಕ್ಕೆ ಹೋಗುವುದಿಲ್ಲ ಅಂತಾ ಹೇಳಿ ಅವಳೊಂದಿಗೆ ಗಲಾಟೆ ಮಾಡಿ 2 ನೇ ಆರೋಪಿತಳ ಮಾತು ಕೇಳಿ 1 ನೇ ಆರೋಪಿ ದಿನಾಲೂ ಸರಾಯಿ ಕುಡಿದು ಬಂದು ನನ್ನ ಮಗಳಿಗೆ ಹೊಡಿಯುತ್ತಿದ್ದ ಎಂದರೆ ಸರಿಯಲ್ಲ. ನಾನು ನನ್ನ ಮಗಳು ದೈಹಿಕವಾಗಿ ಅಶಕ್ತಳಿರುವುದರಿಂದ ಆಕೆಗೆ ತೊಂದರೆ ಕೊಡಬೇಡ್ರಿ ಎಂದು ಆರೋಪಿತರಿಗೆ ತಿಳಿಸಿದರೂ ಸಹ ಅವರು ನನ್ನ ಮಗಳಿಗೆ ತೊಂದರೆ ಕೊಡುತ್ತಿದ್ದುದರಿಂದ ನಮ್ಮ ಊರ ಹಿರಿಯರನ್ನು ಸೇರಿಸಿ ನನ್ನ ಪಾಲಿಗೆ ಬರತಕ್ಕ 20 ಗುಂಟೆ ಜಮೀನನ್ನು 1 ನೇ ಆರೋಪಿತನಿಗೆ ಸಾಗುವಳಿ ಮಾಡಲು ಕೊಟ್ಟಿದ್ದೆ ಎಂದರೆ ಸರಿಯಲ್ಲ.

ದಿನಾಂಕ 29.11.2022 ರಂದು ನಾನು ನನ್ನ ಮಗಳೊಂದಿಗೆ ಜಮೀನಿಗೆ ಕೆಲಸಕ್ಕೆ ಹೋದಾಗ ನನ್ನ ಮಗಳು ಆರೋಪಿತರು ಆಕೆಗೆ ತೊಂದರೆ ಕೊಡುವುದನ್ನು ಬಿಟ್ಟಿಲ್ಲ ಎಂದು ನನಗೆ ತಿಳಿಸಿದ್ದಳು ಎಂದರೆ ಸರಿಯಲ್ಲ. ದಿನಾಂಕ 30.11.2022 ರಂದು ಮಧ್ಯಾಹ್ನ 12.00 ಗಂಟೆ ಸುಮಾರಿಗೆ ನನ್ನ ಮಗಳು ನಮ್ಮ ಮನೆಗೆ ಬಂದು 2 ನೇ ಆರೋಪಿ ತನ್ನ ಮೇಲೆ ಮನೆಯಲ್ಲಿದ್ದ ರೂ.40/- ಕಳುವು ಮಾಡಿದ್ದಾಗಿ ಆರೋಪ ಹೊರಿಸಿ ಬೈಯುತ್ತಿರುವುದಾಗಿ ನನಗೆ ತಿಳಿಸಿದಾಗ ನಾನು ಆಕೆಗೆ ಸಮಾಧಾನ ಪಡಿಸಿ ನರಗುಂದ ತಾಲೂಕಿನ ಕೊಣ್ಣೂರು ಗ್ರಾಮಕ್ಕೆ ಹೋಗಿದ್ದೆ ಎಂದರೆ ಸರಿಯಲ್ಲ. ಅದೇ ದಿನ ನಾನು ಕೊಣ್ಣೂರಿನಲ್ಲಿದ್ದಾಗ ರಾತ್ರಿ 01.00 ಗಂಟೆ ಸುಮಾರಿಗೆ ನನ್ನ ಅಣ್ಣ ಚಾಸಾ -6 ಇವರಿಗೆ ಯಾರೋ ಫೋನ್ ಕರೆ ಮಾಡಿ ಆರೋಪಿತರು ಜಗಳ ಮಾಡಿ 1 ನೇ ಆರೋಪಿ ನನ್ನ ಮಗಳಿಗೆ ಹಲ್ಲೆ ಮಾಡಿದ್ದರಿಂದ ಆಕೆ ಮೃತ ಪಟ್ಟಿದ್ದು, ಆಕೆಯ ಮೃತ ದೇಹ ಬೀಳಗಿ ಸರ್ಕಾರಿ ಆಸ್ಪತ್ರೆಯಲ್ಲಿ ಇರುವುದಾಗಿ ನನಗೆ ತಿಳಿಸಿದ್ದರಿಂದ ನಾನು ಬೆಳಿಗ್ಗೆಯಾದ ನಂತರ ನನ್ನ ಅಣ್ಣನ ಮನೆಗೆ ಬೀಳಗಿ ಸರ್ಕಾರಿ ಆಸ್ಪತ್ರೆಗೆ ಬಂದು ನನ್ನ ಮಗಳ ಶವವನ್ನು ನೋಡಿ ಅಲ್ಲಿದ್ದವರಿಗೆ ವಿಚಾರಿಸಿದಾಗ ಹಿಂದಿನ ದಿನ ರಾತ್ರಿ 10.00 ಗಂಟೆಗೆ 1 ನೇ ಆರೋಪಿ ಸಾರಾಯಿ ಕುಡಿದು ಮನೆಗೆ ಬಂದಾಗ 2 ನೇ ಆರೋಪಿ 1 ನೇ ಆರೋಪಿತನಿಗೆ ನನ್ನ ಮಗಳು ರೂ. 40/- ಕಳ್ಳತನ ಮಾಡಿದ್ದಾಳೆ ಎಂದು ಹೇಳಿದಾಗ 1 ನೇ ಆರೋಪಿ ನನ್ನ ಮಗಳನ್ನು ವಿಚಾರಿಸಿದಾಗ ನನ್ನ ಮಗಳು ಬಾಯಿ ಮಾಡಿದಾಗ 1 ನೇ ಆರೋಪಿ ತನ್ನ ಕೈಗಳಿಂದ ಆಕೆಯ ತಲೆಗೆ ಹಲ್ಲೆ ಮಾಡಿದ್ದರಿಂದ ಆಕೆ ಕೆಳಗೆ ಬಿದ್ದಾಗ ಓಣಿಯಲ್ಲಿ

ಸೇರಿದ ಜನರು ಆರೋಪಿತರಿಗೆ ಬೈದಿದ್ದರಿಂದ  ಆರೋಪಿತರಿಬ್ಬರೂ ಅನಗವಾಡಿ ಕ್ರಾಸ್ ನಲ್ಲಿರುವ ಅಕ್ಕಿಮರಡಿ ಆಸ್ಪತ್ರೆಗೆ ನನ್ನ ಮಗನ್ನು ಕರೆದುಕೊಂಡು ಹೋದಾಗ ಅಲ್ಲಿ ವೈದ್ಯರು ನನ್ನ ಮಗಳಿಗೆ ಚಿಕಿತ್ಸೆ ಕೊಡದಿದ್ದರಿಂದ 1 ನೇ ಆರೋಪಿ ಚಾಸಾ -12 ಮತ್ತು  13 ರವರನ್ನು ಕರೆಯಿಸಿ ಬೀಳಗಿ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋದಾಗ ಅಲ್ಲಿ ವೈದ್ಯರು ನನ್ನ ಮಗಳು ಮೃತ ಪಟ್ಟ ಬಗ್ಗೆ ತಿಳಿಸಿದರು ಎಂದು ನನಗೆ ತಿಳಿದುಬಂದಿತ್ತು ಎಂದರೆ ಸರಿಯಲ್ಲ. ನಾನು ಆಸ್ಪತ್ರೆಗೆ ಹೋದಾಗ ಆರೋಪಿತರಿಬ್ಬರೂ ಅಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. ನಂತರ ಈ ಎಲ್ಲ ವಿಷಯಗಳ ಬಗ್ಗೆ ನಾನು ಬೀಳಗಿ ಪೋಲಿಸ್ ಠಾಣೆಗೆ ಭೇಟಿ ನೀಡಿ ನಿಪಿ -1 ರಂತೆ ಆರೋಪಿತರ ವಿರುದ್ಧ ದೂರು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ನಂತರ ಅದೇ ದಿನ ಮಧ್ಯಾಹ್ನ 12.00 ಗಂಟೆಗೆ ಪೋಲಿಸರು ಘಟನಾ ಸ್ಥಳಕ್ಕೆ ಭೇಟಿ ನೀಡಿದಾಗ ನಾನು ತೋರಿಸಿದ ಸ್ಥಳದಲ್ಲಿ ಪೋಲಿಸರು ಪಂಚನಾಮೆ ಮಾಡಿ ಸ್ಥಳದಲ್ಲಿ ಬಿದ್ದಿದ್ದ ನನ್ನ ಮಗಳ ಬಳೆ ಚೂರುಗಳು ಜಪ್ತು ಪಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಪಂಚನಾಮೆ ಕಾಲಕ್ಕೆ ಪೋಲಸರು ನಿಪಿ -2 ರಂತೆ ಭಾವಚಿತ್ರಗಳನ್ನು ತೆಗೆದಿದ್ದಾರೆ ಎಂದರೆ ಸರಿಯಲ್ಲ. ದಿನಾಂಕ 02.12.2022 ರಂದು ನಾನು ಈಗ ಓದಿ ಹೇಳಿದಂತೆ ಪೊಲೀಸರ ಮುಂದೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಹೇಳಿಕೆಯಲ್ಲಿ ''ನಾನು ಈ ಮೊದಲು ಬಾಗಲಕೋಟೆ ಗ್ರಾಮೀಣ  ಪೋಲಿಸ್ ಠಾಣೆಯಲ್ಲಿ --------------------ಭಾರೀ ಒಳಪೆಟ್ಟು ಹೊಡಿಸಿ ಕೊಲೆ ಮಾಡಿರುತ್ತಾರೆ.'' ಎಂದು ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯನ್ನು ನಿಶಾನೆ ಪಿ-3 ಎಂದು ಗುರುತಿಸಲಾಯಿತು.  ನಾನು ಮತ್ತು ನನ್ನ ಮೊಮ್ಮಕ್ಕಳು ಈಗ ಆರೋಪಿತನೊಂದಿಗೆ ವಾಸವಾಗಿದ್ದೇವೆ ಎಂದರೆ ಸರಿ. ಆ ಕಾರಣಕ್ಕಾಗಿ ಆರೋಪಿತನಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ** ಆರೋಪಿತರ  ಪರ ವಕೀಲರಿಂದ

ಆರೋಪಿತರ ಪರ ವಕೀಲರು ಪಾಟೀ ಸವಾಲು ಇರುವುದಿಲ್ಲ ಎಂದು ತಿಳಿಸಿರುತ್ತಾರೆ.

ಮರು ವಿಚಾರಣೆ ಇಲ್ಲ.

(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ. ಹೇ. ಕೇ. ಸರಿ ಇದೆ ಎಂದು ಒಪ್ಪಿದರು

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬಾಗಲಕೋಟೆ .